**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 820/2021

| | | |
|---|---|---|
| ಸಾಕ್ಷಿದಾರರ ಹೆಸರು | : | ಪ್ರೇಮ ಕುಮಾರಿ |
| ಗಂಡನ ಹೆಸರು | : | ಸುರೇಶ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಅಂಗನವಾಡಿ ಕಾರ್ಯಕರ್ತೆ, ಅಣ್ಣೂರು ಹೊಸಹಳ್ಳಿ |
| ವಾಸಸ್ಥಳ | : | ಅಣ್ಣೂರು ಹೊಸಹಳ್ಳಿ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 28.08.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು ಕಳೆದ 18 ವರ್ಷಗಳಿಂದ ಅಣ್ಣೂರು ಹೊಸಹಳ್ಳಿಯ ಅಂಗನವಾಡಿ ಕಾರ್ಯಕರ್ತೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನಮ್ಮ ಮನೆಯ ಪಕ್ಕದಲ್ಲಿ 1 ನೇ ಆರೋಪಿಯ ಮನೆ ಇರುತ್ತದೆ. 1 ನೇ ಆರೋಪಿಯ ಮನೆಯಲ್ಲಿ ಯಾವುದೇ ಕಾರ್ಯಕ್ರಮ ಅಥವಾ ಸಮಾರಂಭ ನಡೆದರೆ ನನಗೆ ಗೊತ್ತಾಗುತ್ತದೆಂದರೆ ಸರಿ. 1 ನೇ ಆರೋಪಿಯ ಮನೆಯಲ್ಲಿ ಅವರ 17 ವರ್ಷದ ಮಗಳು ವಾಸವಿದ್ದರು. ಚಾಸಾ-2 ರವರಿಗೆ 2 ನೇ ಆರೋಪಿಯ ಜೊತೆ ಮದುವೆ ನಿಶ್ಚಯವಾಗಿತ್ತು. ಆದರೆ ಚಾಸಾ-2 ರವರಿಗೆ 2 ನೇ ಆರೋಪಿಯ ಜೊತೆ ಬಾಲ್ಯ ವಿವಾಹವಾಗಲು ಇಷ್ಟವಿರಲಿಲ್ಲ. ಮದುವೆಯಾಗುವ ಪೂರ್ವದಲ್ಲಿ ನಾನು, ಚಾಸಾ-1 ಮತ್ತು ಚಾಸಾ-6 ಚಾಸಾ-2 ರವರ ಮನೆಗೆ ಹೋಗಿ ಬಾಲ್ಯ ವಿವಾಹವಾಗಬಾರದೆಂದು ತಿಳುವಳಿಕೆ ಹೇಳಿದ್ದೆವು. ನಂತರ ಚಾಸಾ-2 ರವರು

ಚಾಸಾ-1 ರವರಿಗೆ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಛೇರಿಗೆ ದೂರವಾಣಿ ಕರೆ ಮಾಡಿ ನನ್ನನ್ನು ಮದುವೆ ಮಾಡಿರುತ್ತಾರೆ, ನನಗೆ ಕೊಪ್ಪರಹಳ್ಳಿಗೆ ಹೋಗಲು ಇಷ್ಟವಿಲ್ಲವೆಂದು ಹೇಳಿರುತ್ತಾರೆ. ಆಗ ನಾನು ಅಂಗನವಾಡಿಯಲ್ಲಿದ್ದೆ, ನಂತರ ಚಾಸಾ-1, ಚಾಸಾ-6 ಮತ್ತು ಚಾಸಾ-7 ಮತ್ತು ಪೋಲೀಸ್ ಸಿಬ್ಬಂಧಿಗಳು ಬಂದು ಚಾಸಾ-2 ರವರ ಮನೆಗೆ ನನ್ನನ್ನು ಕರೆದುಕೊಂಡು ಹೋಗಿರುತ್ತಾರೆ. ನಂತರ ಚಾಸಾ-1 ರವರು ಚಾಸಾ-2 ರವರನ್ನು ವಿಚಾರಿಸಿ ಕಛೇರಿಗೆ ಕರೆದುಕೊಂಡು ಹೋಗಿರುತ್ತಾರೆ. ಈಗ ನನಗೆ ತೋರಿಸುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದ್ದು, ಸದರಿ ಸಹಿಯನ್ನು ಎಲ್ಲಿ ಹಾಕಿರುತ್ತೇನೆಂದು ನನಗೆ ನೆನಪಿಲ್ಲ. ಸಾಕ್ಷಿಯು ದಿನಾಂಕಃ 02.06.2020 ರ ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸ್ಥಳ ಮಹಜರ್ ನ್ನು ನಿ.ಪಿ.-3 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.-3(ಎ) ಎಂದು ಗುರುತಿಸಲಾಯಿತು. ರಾಮೇಗೌಡ ಎಂಬುವವರು ಚಾಸಾ-2 ರವರ ಮನೆಯ ಹತ್ತಿರ ಬಂದು ಮಹಜರ್ ಮಾಡಿರುತ್ತಾರೆ. ಪೋಲೀಸರು ನನ್ನನ್ನು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮಾನ್ಯ ಸ.ಸ.ಅ ಕೋರಲಾಗಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಸ.ಸ.ಅ ರವರಿಂದಃ**

ದಿನಾಂಕಃ 16.04.2020 ರಂದು 1, 3 ಮತ್ತು 4 ನೇ ಆರೋಪಿಗಳು ಸೇರಿ ಬೆಳಗಿನ ಜಾವ 05.00 ಗಂಟೆ ಸಮಯದಲ್ಲಿ ಚಾಸಾ-2 ರವರನ್ನು 2 ನೇ ಆರೋಪಿಯ ಜೊತೆ ಮದುವೆ ಮಾಡಿಸಿರುತ್ತಾರೆಂದರೆ ಚಾಸಾ-1 ರವರು ಬಂದು

ತಿಳಿಸಿದ ನಂತರ ಗೊತ್ತಾಗಿರುತ್ತದೆ. ನಿ.ಪಿ.-3 ಕ್ಕೆ ಚಾಸಾ-2 ರವರ ಮನೆಯ ಬಳಿ ಮಹಜರ್ ಮಾಡಲು ಬಂದಾಗ ಸಹಿ ಹಾಕಿರುತ್ತೇನೆಂದರೆ ಹಾಕಿರಬಹುದು.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ. ಬಿ.ಎಸ್.ಯು. ವಕೀಲರಿಂದಃ**

ಮದುವೆ ಮಾಡುವ ಸಮಯದಲ್ಲಿ ಹಿಂದೂ ಸಂಪ್ರದಾಯ ಪ್ರಕಾರ ಕೆಲವೊಂದು ವಿಧಿ-ವಿಧಾನಗಳನ್ನು ಅನುಸರಿಸುತ್ತಾರೆಂದರೆ ಬಾಲ್ಯ ವಿವಾಹ ಮಾಡುವಾಗ ಅವುಗಳನ್ನು ಪಾಲಿಸುವುದಿಲ್ಲ. ನನ್ನ ಮತ್ತು 1 ನೇ ಆರೋಪಿಯ ನಡುವೆ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಸುಳ್ಳು ಮಾಹಿತಿ ನೀಡಿರುತ್ತೇನೆಂದರೆ ನಾನು ಯಾವುದೇ ಮಾಹಿತಿ ನೀಡಿರುವುದಿಲ್ಲ. ನಾನು ಯಾರ ಮುಂದೆಯೂ ಹೇಳಿಕೆ ನೀಡಿಲ್ಲವೆಂದರೆ ಸರಿ.

**ಪಾಟೀ ಸವಾಲುಃ 2 ರಿಂದ 4 ನೇ ಆರೋಪಿಗಳ ಪರ ಶ್ರೀ. ಎಂ.ಎಸ್.ಕೆ. ವಕೀಲರಿಂದಃ**

ನನ್ನ ಮನೆಯಿಂದ ಚಾಸಾ-2 ರವರ ಮನೆಗೆ ಸುಮಾರು 20 ಅಡಿ ದೂರವಿರುತ್ತದೆ. ಅಂಗನವಾಡಿಯಿಂದ ನಮ್ಮ ಮನೆಗೆ ಸುಮಾರು 200 ಮೀಟರ್ ದೂರವಿರುತ್ತದೆ. ನಮ್ಮ ಗ್ರಾಮದಲ್ಲಿ ಯಾವುದೇ ಮದುವೆ ಸಮಾರಂಭ ನಡೆದರೆ ಮಾಹಿತಿ ಇರುತ್ತದೆಂದರೆ ಸರಿ. ಚಾಸಾ-2 ರವರ ಗಂಡನ ಹೆಸರು ಅಶೋಕ. ಚಾಸಾ-2 ರವರು ಚಾಸಾ-1 ರವರಿಗೆ ದೂರವಾಣಿ ಕರೆ ಮಾಡಿ ಅಶೋಕರವರ ಜೊತೆ ತನ್ನ ಮದುವೆಯಾಗಿರುತ್ತದೆಂದು ಹೇಳಿದ ನಂತರ ನನಗೆ ಗೊತ್ತಾಗಿರುತ್ತದೆ. ಯಾವ ದಿನಾಂಕದಂದು ಕರೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಚಾಸಾ-2 ತನಗೆ ಬಾಲ್ಯ ವಿವಾಹ ಮಾಡಿರುತ್ತಾರೆಂದು ನನ್ನ ಮುಂದೆ ಮಾಹಿತಿ ನೀಡಿಲ್ಲ. ಮದುವೆಯಾಗುವ ಹಿಂದಿನ ದಿವಸ ನಾವು ಹೋಗಿ ಮಾಹಿತಿ ನೀಡಿದ್ದೆವು ಆದರೆ ದಿನಾಂಕ ನೆನಪಿಲ್ಲ. ಈ

ರೀತಿ ಮದುವೆ ಮಾಡುತ್ತಿದ್ದಾರೆಂದು ಚಾಸಾ-2 ರವರೇ ಚಾಸಾ-1 ರವರಿಗೆ ಮಾಹಿತಿ ನೀಡಿದ್ದರು. ಚಾಸಾ-1 ರವರು ಹೇಳಿದ್ದರಿಂದ ಈ ಪ್ರಕರಣದ ಬಗ್ಗೆ ನನಗೆ ಮಾಹಿತಿ ಗೊತ್ತಾಗಿರುತ್ತದೆಂದರೆ ಸರಿ. ಪೋಲೀಸರು ಬಂದಾಗ ಯಾರನ್ನು ವಿಚಾರಣೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಪೋಲೀಸರು ನನ್ನನ್ನು ವಿಚಾರಿಸಿರುತ್ತಾರೆ. ಪೋಲೀಸರು ಬಂದಾಗ ನನ್ನ ಸಹಿ ಪಡೆದಿರುತ್ತಾರೆ ಆದರೆ ನನ್ನ ಜೊತೆ ಯಾರು ಸಹಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಪೋಲೀಸರು ಬೆಳಿಗ್ಗೆ 11.00 ಗಂಟೆಗೆ ಬಂದಿದ್ದರು. ನಿ.ಪಿ.-3 ರಲ್ಲಿ ಏನೆಲ್ಲಾ ಬರೆದಿರುತ್ತದೆಂದು ನನಗೆ ಗೊತ್ತಿಲ್ಲ. ನಿ.ಪಿ.-3 ನ್ನು ಬರೆಯಲು ಯಾರು ಮಾಹಿತಿ ಕೊಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಚಾಸಾ-2 ರವರ ಗಂಡನ ಹೆಸರು ಸುನಿಲ್ ಕುಮಾರ್ ಎಂದರೆ ಚಾಸಾ-2 ರವರೇ ಮಾಹಿತಿ ಕೊಟ್ಟಂತೆ ಈ ಮೊದಲು ಚಾಸಾ-2 ರವರಿಗೆ ಅಶೋಕರವರ ಜೊತೆ ಮದುವೆಯಾಗಿತ್ತು, ಈಗ ಸುನಿಲ್ ಕುಮಾರ್ ರವರ ಜೊತೆ ಮದುವೆಯಾಗಿರುತ್ತದೆ ಮತ್ತು ನಮ್ಮ ಅಂಗನವಾಡಿಗೆ ಹೆಸರು ನಮೂದಿಸುವಾಗ ಗಂಡನ ಹೆಸರು ಸುನಿಲ್ ಕುಮಾರ್ ಎಂದು ನಮೂದಿಸಿರುತ್ತಾರೆ. ಚಾಸಾ-2 ಮತ್ತು 2 ನೇ ಆರೋಪಿಯ ನಡುವೆ ಮದುವೆಯಾಗಿರುವ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನೋಡಿರುವುದಿಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**